ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ ಸಿ ನಂಬರ :802/2019
CW-11 PW-9

| | |
|---|---|
| ಹೆಸರು | : ಮುಸ್ತಕ ಅತ್ತಾರ |
| ಗಂಡ ಹೆಸರು | : ಮಕ್ತುಮಸಾಬ |
| ವಯಸ್ಸು | : 31 ವರ್ಷ |
| ಉದ್ಯೋಗ | : ಚಹಾ ಅಂಗಡಿಯಲ್ಲಿ ಕೆಲಸ |
| ವಾಸಸ್ಥಳ | : ಗಜೇಂದ್ರಗಡ |

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28–04–2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಮಂಜುನಾಥ ಬಿನ್ನಾಳ -ಚಾಸಾ-1 ರವರು ನನಗೆ ಗೊತ್ತು. ಸುಮಾರು 5-6 ವರ್ಷಗಳ ಹಿಂದೆ ಕಾಂಗ್ರೆಸ ಮತ್ತು ಫ್ರೆಂಡ್ಸ್ ಬಾರನಲ್ಲಿ ನಾನು ಸಪ್ಲಯರ ಅಂತಾ ಕೆಲಸ ಮಾಡುತ್ತಿದ್ದೇ. ರಾತ್ರಿ 11.00 ಗಂಟೆಗೆ ಬಾರನ್ನು ಕ್ಲೊಸ ಮಾಡಿಕೊಂಡು ಹೋಗಿದ್ದೇವು. ಮತು ದಿನ ಬೆಳಿಗ್ಗ 09.00 ಗಂಟೆಗೆ ಬಾರಗೆ ಬಂದು ನೋಡಲಾಗಿ ಬಾರನ ಸೆಟ್ರಸ ಓಪನ ಆಗಿತ್ತು, ನಮ್ಮ ಮಾಲಿಕರಾದ ಚಾಸಾ-1 ರವರು ಬಾರನಲ್ಲಿ ಹಣ ಕಳ್ಳತನ ಆಗಿರುತ್ತದೆ ಎಂದು ನಮಗೆ ಹೇಳಿರುತ್ತಾರೆ. ಇಷ್ಟನ್ನು ಬಿಟ್ಟು ನನಗೆ ಬೇರೆ ಏನು ಗೊತ್ತಿಲ್ಲ.

( ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 31-07-2018 ರಂದು ರಾತ್ರಿ 11.00 ಗಂಟೆಗೆ ಅಂಗಡಿಯನ್ನು ಕ್ಲೊಸ ಮಾಡಿಕೊಂಡು ಹೋದಾಗ ಮಧ್ಯರಾತ್ರಿ ಯಾರೋ ಕಳ್ಳರು ಅಂಗಡಿಯ ಸೆಟ್ರಸನ್ನು ಓಪನ ಮಾಡಿ ಡ್ರಾದಲ್ಲಿ ಹಣ ಕಳ್ಳತನ ಮಾಡಲು ಪ್ರಯತ್ನ ಮಾಡಿದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ದಿಃ 30-01-2019 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಬೆಳಿಗ್ಗೆ ಪೊಲೀಸ ಠಾಣೆಗೆ ಆರೋಪಿತರನ್ನು ಕರೆದುಕೊಂಡು ಬಂದು ನಮ್ಮ ಸಮಕ್ಷಮ ವಿಚಾರಣೆ ಮಾಡಿದರು ಎಂದರೆ ಸರಿಯಲ್ಲ. ಅವರ ಹೆಸರು ವಿಳಾಸ ವಿಚಾರಿಸಿ ಇನ್ನಿಬ್ಬರ ಕಳ್ಳರ ಹೆಸರು ತಿಳಿಸಿದರು ಎಂದರೆ ಸರಿಯಲ್ಲ. ಆ ದಿನ ಪೊಲೀಸ

ಠಾಣೆಯಲ್ಲಿ ಇದ್ದ ವ್ಯಕ್ತಿಗಳು ವೇಂಕಟೇಶ ಮತ್ತು ಚಕ್ರವರ್ತಿ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಮಧ್ಯರಾತ್ರಿ 02.30 ಗಂಟೆ ಸುಮಾರಿಗೆ ಫ್ರೆಂಡ್ಸ್ ಬಾರನ ಸೆಟ್ರಸ್ ಎತ್ತಿ ಕಳ್ಳತನ ಮಾಡಲು ಪ್ರಯತ್ನಿಸಿದಾಗ ಪೊಲೀಸರು ಬಂದಿದ್ದರಿಂದ ನಾವು 4 ಜನರು ಓ ಹೋದೇವು ಎಂದು ಹೇಳಿದರು ಎಂದರೆ ಸರಿಯಲ್ಲ. ಆ ದಿನ ಬೇರೆ ಕಡೆ ಕಳ್ಳತನ ಮಾಡಿದ್ದೇವೆ ಎಂದು ನಮ್ಮ ಸಮಕ್ಷಮ ಒಪ್ಪಿಕೊಂಡರು ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಎಸ್.ಬಿ.ಹೆಚ್. 1 ನೇ ಆರೋಪಿಯ ಪರ ವಕೀಲರಿಂದಃ**

ಕಳ್ಳತನವಾದ ಬಗ್ಗೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಪೊಲೀಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ಚಾಸಾ-1 ರವರು ಹೇಳಿದಂತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ಚಾಸಾ-1 ನಮ್ಮ ಮಾಲಿಕರಾಗಿದ್ದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.
Sd/-
(ಹುಲುಗಪ್ಪ ಡಿ.)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ಗಜೇಂದ್ರಗಡ.